ಎರಡು ಗಂಟೆಯಾಗುತ್ತಿದ್ದಂತೆ ಮದುವೆಗೆ ಬಂದವರ ಕಾರುಗಳು ರೆಸಾರ್ಟ್ ಗೇಟನ್ನು ದಾಟತೊಡಗಿದವು. ರೆಸಾರ್ಟ್ ಹಾಲಿನಲ್ಲಿಟ್ಟಿದ್ದ ಕುರ್ಚಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಇಷ್ಟು ಹೊತ್ತು ಬಿಳಿ ಸ್ಯಾಟಿನ ಕವರುಗಳಿಂದಾಗಿ ಹಂಸದಂತಿದ್ದ ಕುರ್ಚಿಗಳು ಬಣ್ಣ ಕಳೆದುಕೊಂಡು ನಿಸ್ತೇಜವಾಗಿದ್ದವು. ಮಹಿಳೆಯರ ಮುಡಿಯೇರಿದ್ದ ಮಲ್ಲಿಗೆ ಹೂಗಳು, ಅಲಂಕಾರವಾಗಿದ್ದ ಗುಲಾಬಿ, ಡೈಸಿ ಹೂಗಳು ಮುದುಡಿಕೊಂಡು ನೆಲದ ಮೇಲೆ ಉರುಳಾಡುತ್ತಿದ್ದವು. ಹೊರಗಡೆಯ ಲಾನ್‌ನಲ್ಲಿ ಅಲ್ಲಲ್ಲಿ ಉಂಡ ತಟ್ಟೆ, ಲೋಟಗಳು ಹಾರಾಡುತ್ತಿದ್ದವು. ಕಸದ ಡಬ್ಬಿಯಿಂದಲೂ ಕಸ, ಮುಸುರೆಯ ವಾಸನೆ ಜೋರಾಗಿ ಬರುತ್ತಿತ್ತು. ಸ್ಟೇಜಿನ ಮೇಲಿದ್ದ ಅರಮನೆಯ ಕಂಬಗಳನ್ನು ಪರಮೇಶ್ವರ ಒಂದೊಂದಾಗಿ ಕಳಚಿಡ ತೊಡಗಿದ. ಹೋಮ ಕುಂಡದ ಅಗ್ನಿ ಇನ್ನೂ ಆರಿರಲಿಲ್ಲ. ಅದರಿಂದ ಸಣ್ಣಗೆ ಹೊಗೆ ಬರುತ್ತಿತ್ತು. ಪರಮೇಶ್ವರನಿಗೆ ಏನನ್ನಿಸಿತೋ... ಸುಜಾತಳಿಗಾಗಿ ಹುಡುಕಿದ, ಅವಳು ರೆಡ್ ಕಾರ್ಪೆಟ್ ಮಡಚುವುದು ಕಾಣಿಸಿತು.



'ಸುಜಾ... ಬಾ ಇಲ್ಲಿ'.

ಅವಳು ಏನೆಂದು ಪ್ರಶ್ನಿಸದೆ ಬಂದಳು.

'ಸುಜಾ... ನಾವು ಮದ್ವೆ ಮಾಡಿಕೊಳ್ಳೋಣ್ವಾ? ಇವತ್ತು ಹೇಗೂ ಒಳ್ಳೆಯ ಮುಹೂರ್ತವಿದೆ, ಆದ್ರೆ ನಾನು ನಿನಗಿಂತ ಎರಡಿಂಚು ಕುಳ್ಳ, ಈ ಕುಳ್ಳನನ್ನು ಮದ್ವೆಯಾಗ್ತಿಯೇನಮ್ಮ?' ಎಂದ.

'ಬುದ್ಧಿ ಸರಿ ಇದ್ಯಾ ನಿಂಗೆ, ನಾನು ನಿಂಗಿಂತ ಎರಡ್ಮೂರು ವರ್ಷವಾದರೂ ದೊಡ್ಡವಳು ಅಂತ ಗೊತ್ತಿಲ್ವಾ? ಅಲ್ದೆ ನೀನು ಚೆಂದಾಗಿದ್ದಿ ಬಿಡು' ಎಂದರೂ ಕಣ್ಣಲ್ಲಿ 100ವಾಟ್ ಬಲ್ಬಿನ ಬೆಳಕಿತ್ತು. 'ನೀನು ಹೆಣ್ಣು, ನಾನು ಗಂಡು, ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡಿದ್ದೀವಿ ಸಾಕಲ್ವಾ?' ಎನ್ನುತ್ತಾ ಮದು ಮಕ್ಕಳು ಹಾಕಿ ಬಿಟ್ಟಿದ್ದ ಹೂವಿನ ಮಾಲೆಯನ್ನು ಅವಳಿಗೆ ಹಾಕಿದ. ವೀಳ್ಯದೆಲೆಯ ಮೇಲೆ ಅರಿಶಿನದ ಕೊಂಬು, ಹಳದಿ ದಾರವಿತ್ತು. ಬೆಳಗ್ಗಿನ ಮದುವೆಯಲ್ಲಿ ವಜ್ರದ ಮಾಂಗಲ್ಯ ಕಟ್ಟುವ ಗಡಿಬಿಡಿಯಲ್ಲಿ ಅರಿಶಿನದ ಕೊಂಬು ಕಟ್ಟುವುದನ್ನು ಮರೆತಿದ್ದರು. ಪರಮೇಶ್ವರ ಅದನ್ನೇ ಅವಳಿಗೆ ಕಟ್ಟಿದ, ಕುಂಕುಮವನ್ನು ಅವಳ ಹಣೆಗಿಟ್ಟ. ಡೈಸಿ ಹೂವೊಂದನ್ನು ಅವಳಿಗೆ ಮುಡಿಸಿದ. ವಾದ್ಯದವರು ಗಟ್ಟಿ ಮೇಳ ಊದಿದರು. ಅಲ್ಲೇ ಇದ್ದ ಕೆಲಸದ ಹುಡುಗರು ಮಂತ್ರಾಕ್ಷತೆ ಹಾಕಿದರು. 'ಅಲ್ವೇ ನಿನ್ನ ಮದ್ವೆಗಾದರೂ ಒಂದು ಒಳ್ಳೆಯ ಸೀರೆ ಉಡೋದಲ್ವಾ?' ಅವಳನ್ನು ಛೇಡಿಸುತ್ತಾ ಅವಳ ಕೈ ಹಿಡಿದುಕೊಂಡು ರೆಡ್ ಕಾರ್ಪೆಟ್ ಮೇಲೆ ನಡೆದ. ಅವನಿ ರಿಸಾರ್ಟಿನಲ್ಲಿ ಮತ್ತೊಂದು ಮದುವೆ ನಡೆಯಿತು.

* * *

ಅಂಗಡಿಯೊಂದರ ಮುಂದೆ ಪರಮೇಶ್ವರ ಸ್ಕೂಟರ್ ನಿಲ್ಲಿಸಿದ, ಮಗುವನ್ನೆತ್ತಿಕೊಂಡ ಸುಜಾತ ಇಳಿದಳು. ಪಕ್ಕದಲ್ಲೇ ದೊಡ್ಡ ಬೆಂಜ್ ಕಾರೊಂದು ಬಂದು ನಿಂತಿತು. ಅದರಿಂದ ಪ್ಯಾಂಟ್, ಶರ್ಟ್ ಧರಿಸಿದ ಮಹಿಳೆಯೊಬ್ಬಳು ಇಳಿದಳು. ಸುಜಾತಳಿಗೆ ಅವಳನ್ನು ಗುರುತಿಸಲು ಹೆಚ್ಚು ಕಷ್ಟವಾಗಲಿಲ್ಲ, ಅವಳನ್ನು ಮಾತಾಡಿಸಿದಳು. 'ಮೇಡಂ ನಿಮ್ಮ ಮದುವೆ ಅವನಿ ರೆಸಾರ್ಟಿನಲ್ಲಿ 3 ವರ್ಷಗಳ ಹಿಂದೆ ನಡೆದದ್ದಲ್ವಾ?' ಅವಳ ಮುಖ ಗಂಭೀರವಾಯಿತು. ಅವರನ್ನು ಒಂದೇ ಸಮನೆ ದೃಷ್ಟಿಸಿ, 'ಹೌದು, ಆದರೆ ಆ ಮದ್ವೆ ವರ್ಕೌಟ್ ಆಗಲಿಲ್ಲ, ಅವನನ್ನು ಡಿವೋರ್ಸ್ ಮಾಡಿದೆ. ಅವನು ಬಹಳ ಸೆಲ್ಫಿಶ್, ಆರು ತಿಂಗಳಲ್ಲೇ ಬಿಟ್ಟುಬಿಟ್ಟೆ. ನಿಮಗೆ ಹೇಗೆ ಗೊತ್ತು? ಮದ್ವೆಗೆ ಬಂದ್ರಿದ್ರಾ? ಆ ಮದ್ವೆ ಛತ್ರವೂ ಒಂದು ತರಹ ಅನ್ಲಕ್ಕಿ' ಒಂದೇ ಸಮನೆ ಮಾತಾಡಿದಳು. 'ನಿಮ್ಮ ಮದ್ವೆಗೆ ಅಲಂಕರಿಸಿದ್ದು ನಾವೇ, ಅದೇ ದಿನ ನಾವೂ, ಅಲ್ಲೇ ಮದ್ವೆ ಮಾಡಿಕೊಂಡೆವು'. ಅವರನ್ನು ತದೇಕ ದೃಷ್ಟಿಯಿಂದ ನೋಡಿ, ಅವರ ಕಣ್ಣಿನಲ್ಲಿದ್ದ ಪ್ರೀತಿಯನ್ನು, ಖುಷಿಯನ್ನು ಓದಲು ಪ್ರಯತ್ನಿಸುತ್ತಾ ಮುನ್ನಡೆದವಳೆಂದುಕೊಂಡಳು 'ಬಹುಶಃ ದಾಂಪತ್ಯಕ್ಕೆ ಬೇಕಾಗಿರುವುದು ಪರಸ್ಪರ ಪ್ರೀತಿ, ಗೌರವ, ಲಕ್ಕಿ ಪೀಪಲ್'.

●